


ವಿಶಿಷ್ಟ ವಿನ್ಯಾಸದ 'ಕ್ರುಕೆಡ್ ಹೌಸ್'

ಈ ಪ್ರವೇಶ ದ್ವಾರ ದಾಟಿ ಹೊರಬಂದರೆ ಸದ್ದಿಲ್ಲದೆ ಪ್ರಶಾಂತವಾಗಿ ಹರಿಯುತ್ತಿದ್ದ ಮೋಟ್ಲಾವಾ ನದಿ, ಅದರ ಎರಡೂ ದಡಗಳಲ್ಲಿ ಶತಮಾನಗಳಷ್ಟು ಹಳೆಯ ಕಟ್ಟಡಗಳು, ಜೊತೆಗೆ ಸದ್ದಿಲ್ಲದೆ ಸೇರಿಕೊಂಡ ಹೊಸ ಕಟ್ಟಡಗಳು, ಅವುಗಳ ಎದುರು ಸಣ್ಣ ಕಾಲುದಾರಿ, ಬೇರೆ ಬೇರೆ ದೇಶಗಳ ತಿನಿಸನ್ನು ಉಣಬಡಿಸುವ ರೆಸ್ಟೋರೆಂಟ್‌ಗಳು, ಎರಡೂ ದಡಗಳನ್ನು ಬೆಸೆಯುವ ಸೇತುವೆಗಳು, ಎಲ್ಲವನ್ನೂ ಕುತೂಹಲದಿಂದ ನೋಡುವ ಪ್ರವಾಸಿಗರು, ನದಿಯ ನೀರಿನಲ್ಲಿ ಪ್ರವಾಸಿಗರನ್ನು ಹೊತ್ತೊಯ್ಯುತ್ತಿದ್ದ ಬೋಟುಗಳು ಕಣ್ಸೆಳೆದವು. ತಮ್ಮದೇ ಸ್ವಂತ ಬೋಟ್ ಇಟ್ಟುಕೊಂಡ ಶ್ರೀಮಂತ ಸ್ಥಳೀಯರು ಆ ಬಿಸಿಲ ದಿನದಂದು ಜಲವಿಹಾರ ಮಾಡುತ್ತಿದ್ದರು.

ಮೋಟ್ಲಾವಾ ನದಿ ದಡದಲ್ಲಿ ಸುಮಾರು 15ನೇ ಶತಮಾನದಲ್ಲಿ ಕಟ್ಟಲಾದ ಕ್ರೇನ್ ಇದೆ. ಹಿಂದೆ ಹಡಗುಗಳಿಗೆ ವಸ್ತುಗಳನ್ನು ಏರಿಸಲು ಹಾಗೂ ಇಳಿಸಲು ಇದನ್ನು ಬಳಸಲಾಗುತ್ತಿತ್ತು. ನಾಲ್ಕು ಟನ್ ಭಾರ ಎತ್ತುವ ಸಾಮರ್ಥ್ಯವಿತ್ತಂತೆ ಇದಕ್ಕೆ. ವಿಶ್ವಯುದ್ಧದ ಸಮಯ ಹಾನಿಗೊಳಗಾಗಿ ನಂತರ ಪುನರ್ ನಿರ್ಮಾಣವಾಯಿತು. ಹತ್ತಿರದಲ್ಲೇ ಇರುವ 'ಮ್ಯೂಸಿಯಂ ಆಫ್ ಸೆಕೆಂಡ್ ವರ್ಲ್ಡ್ ವಾರ್' ಎಂಬ ಸಂಗ್ರಹಾಲಯದಲ್ಲಿ ಪ್ರಪಂಚ ಯುದ್ಧಕ್ಕೆ ಸಂಬಂಧಿಸಿದ ಬಹಳಷ್ಟು ಮಾಹಿತಿಗಳಿದ್ದು, ಯುದ್ಧದ ಕರಾಳತೆಯ ಪರಿಚಯ ಮಾಡಿಕೊಡುತ್ತದೆ.

ಗದಾನ್ಸ್ಕ್ 'ಅಂಬರ್ ಕಲ್ಲುಗಳ ರಾಜಧಾನಿ' ಎಂದೇ ವಿಶ್ವ ಪ್ರಸಿದ್ಧಿ ಪಡೆದ ಊರು. ಸಾವಿರಾರು ವರ್ಷಗಳ ಹಿಂದೆ ಮರದಿಂದ ಒಸರಿದ ಅಂಟಿನ ಉಂಡೆಗಳು ಈಗ ಅಂಬರ್ ಕಲ್ಲುಗಳಾಗಿ ವೈವಿಧ್ಯಮಯ ಆಭರಣಗಳ ತಯಾರಿಕೆಯಲ್ಲಿ ಬಳಕೆಯಾಗುತ್ತಿವೆ. ಅಲ್ಲಲ್ಲಿ ಅಂಟಿನ ಉಂಡೆಗಳ ಒಳಗೆ ಉಳಿದ ಸೊಳ್ಳೆ, ನೊಣ, ಇರುವೆ, ಮುಂತಾದ ಸಣ್ಣ ಜೀವಿಗಳ ಪಳೆಯುಳಿಕೆಗಳನ್ನೂ ಆ ಕಲ್ಲುಗಳಲ್ಲಿ



ಗ್ರೀಕ್ ದೇವತೆ ನೆಪ್ಟ್ಯೂನನ ಫೌಂಟನ್ ಮುಂದೆ ಲೇಖಕಿ

ಕಾಣಬಹುದು. ಆಸಕ್ತರು ಗದಾನ್ಸ್ಕ್‌ನಲ್ಲಿರುವ ಅಂಬರ್ ಸಂಗ್ರಹಾಲಯವನ್ನು ವೀಕ್ಷಿಸಿ – ಅಂಬರ್ ಕಲ್ಲುಗಳು ಸಿಗುವ ಬಗೆ, ಅದರ ಬಳಕೆ, ಬೇಡಿಕೆ ಇವೆಲ್ಲವುದರ ಮಾಹಿತಿ ಪಡೆಯಬಹುದು. ಪ್ರತಿವರ್ಷವೂ ಇಲ್ಲಿ ಅಂತರರಾಷ್ಟ್ರೀಯ ಅಂಬರ್ ಪರಿಷೆ ನಡೆಯುತ್ತದೆ. ಅದನ್ನು ನೋಡಲು ದೇಶ ವಿದೇಶಗಳಿಂದ ಜನರು ಆಗಮಿಸುತ್ತಾರೆ.

ಗದಾನ್ಸ್ಕ್‌ನಿಂದ ಸುಮಾರು ಅರ್ಧ ಗಂಟೆ ರೈಲು ಪ್ರಯಾಣದ ದೂರದಲ್ಲಿ ಗಿದಿನಿಯ ಎಂಬ ಇನ್ನೊಂದು ಪುಟ್ಟ ನಗರಿ ಇದೆ. ಮರುದಿನ ಬೆಳಿಗ್ಗೆ ಅಲ್ಲಿದ್ದೆವು ನಾವು. ಗಿದಿನಿಯದ ರಸ್ತೆಗಳಲ್ಲಿ ಸುಮ್ಮನೆ ಊರು ನೋಡೋಣವೆಂದು ಓಡಾಡುತ್ತಿದ್ದಾಗ ಒಂದು ದೊಡ್ಡ ಮಾರುಕಟ್ಟೆ ಕಂಡಿತು. ನಮ್ಮ ಸಂತೆಗಳಿಗೆ ಬಹಳಷ್ಟು ಸಾಮ್ಯತೆ ಇದ್ದ ತೆರೆದ ಮಾರುಕಟ್ಟೆ ಅದು. ಎಲ್ಲೆಲ್ಲೂ ಸೂಪರ್ ಮಾರ್ಕೆಟ್‌ಗಳೆಂಬ ದೊಡ್ಡ ಕಟ್ಟಡಗಳೇ ಕಾಣುವ ಉತ್ತರ ಯೂರೋಪಿನಲ್ಲಿ ಇಂತಹ ದೃಶ್ಯ ಅಪರೂಪ.

ಆ ಸಂತೆಯಲ್ಲಿ ಹೂವಿನ ಅಂಗಡಿ, ತರಕಾರಿಗಳು, ಆಟಿಕೆಗಳ ಅಂಗಡಿ, ಬಟ್ಟೆ, ಪುಸ್ತಕಗಳು, ನಿತ್ಯ ಬಳಕೆಯ ವಸ್ತುಗಳು ಎಲ್ಲವೂ ಇದ್ದವು. ಹಣ್ಣಿನ ಅಂಗಡಿಗಳಲ್ಲಿ ಚೆರ್ರಿ, ಬ್ಲೂಬೆರ್ರಿ, ಸ್ಟ್ರಾಬೆರ್ರಿ, ಬ್ಲಾಕ್ ಬೆರ್ರಿ ಸೇರಿದಂತೆ ಅದೆಷ್ಟೋ ಹೆಸರೇ ಗೊತ್ತಿಲ್ಲದ ಕೆಂಪು, ಬಿಳಿ, ಹಳದಿ, ಕಪ್ಪು ಒಳಗೊಂಡ ನಾನಾವರ್ಣದ ಹಣ್ಣುಗಳು ಕಂಡವು.

ಹತ್ತಿರದಲ್ಲೇ ಸಮುದ್ರ ತೀರವಿದ್ದುದರಿಂದ ಅದರೆಡೆಗೆ ಸಾಗುತ್ತಿದ್ದ ದಾರಿ ಹಿಡಿದೆವು. ಆ ದಾರಿಯ ಎರಡೂ ಬದಿಗಳಲ್ಲಿ ಮಕ್ಕಳಿಗಾಗಿ ಅಂಗಡಿಗಳಿದ್ದವು. ದೊಡ್ಡ ಗಾತ್ರದ ಗೊಂಬೆಗಳು, ಐಸ್‌ಕ್ರೀಮ್, ಚಾಕೊಲೇಟ್ ಅಂಗಡಿಗಳು, ಬಿಸಿಬಿಸಿಯಾಗಿ ಪಾಪ್ ಕಾರ್ನ್ ಮಾರುವ ಅಂಗಡಿಗಳು, ತಾರಕ ಧ್ವನಿಯಲ್ಲಿ ಕೇಳಿಬರುತ್ತಿದ್ದ ವಾದ್ಯ ಸಂಗೀತ! ಓಹ್ ಅಲ್ಲೊಂದು ಪುಟ್ಟ ಜಾತ್ರೆಯೇ ನಡೆಯುತ್ತಿದ್ದಂತಿತ್ತು. ಚಿಕ್ಕ ಮಕ್ಕಳು ಕೈಯಲ್ಲಿ ದೊಡ್ಡ ದೊಡ್ಡ ಗೊಂಬೆಗಳನ್ನು ಹಿಡಿದುಕೊಂಡು, ಐಸ್‌ಕ್ರೀಮ್ ಮೆಲ್ಲುತ್ತ ಅಪ್ಪ ಅಮ್ಮನ ಜೊತೆ ಹೆಜ್ಜೆ ಹಾಕುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಗದಾನ್ಸ್ಕ್ ಮತ್ತು ಗಿದಿನಿಯ ನಡುವೆ ಇರುವ ಇನ್ನೊಂದು ಪುಟ್ಟ ಊರು ಸೊಪೊಟ್. ವಾಪಸು ಬರುವ ದಾರಿಯಲ್ಲಿ ಸೊಪೊಟ್ ಇದ್ದುದರಿಂದ ಅದನ್ನು ನೋಡಿಯೇ ಹೋಗೋಣವೆಂದು ಇಳಿದೆವು. ಆಕಾಶದಲ್ಲಿ ನಿಧಾನವಾಗಿ ಮೋಡಗಳು ಸೇರತೊಡಗಿದ್ದವು. ಸೊಪೊಟ್ ರೆಸಾರ್ಟ್‌ಗಳ ಊರು. ಇಲ್ಲಿನ ಉದ್ದ ಉದ್ದದ ಕಡಲ ತೀರದಲ್ಲಿ ಸಮಯ ಕಳೆಯಲು ಬರುವ ಜನರನ್ನು ಆದರಿಸಲು ರೆಸಾರ್ಟ್‌ಗಳು ಸರ್ವ ರೀತಿಯಲ್ಲೂ ತಯಾರಾಗಿ ನಿಂತಿರುತ್ತವೆ. ನಮ್ಮಂತಹ ಒಂದು ದಿನಕ್ಕಷ್ಟೇ ಬಂದು ಹೋಗುವ ಪ್ರವಾಸಿಗರನ್ನು ಮುಖ್ಯವಾಗಿ ಸೆಳೆಯುವುದು, 'ಸೊಪೊಟ್ ಪೈರ್' ಎಂಬ ಸಮುದ್ರ ದಡದಲ್ಲಿ ನೀರಿಗೆ ಚಾಚಿಕೊಂಡಿರುವಂತಹ ಎತ್ತರದ ಕಾಲು ದಾರಿ.

ಸುಮಾರು ಅರ್ಧ ಕಿ.ಮೀ. ಉದ್ದದ ಸೊಪೊಟ್ ಪೈರ್ ಕಾಲು ದಾರಿಯದ್ದು ವಿಹಂಗಮ ನೋಟ. ಇದು ಯೂರೋಪ್‌ನ ಅತಿ ಉದ್ದದ ಮರಮುಟ್ಟುಗಳನ್ನು ಬಳಸಿ ಕಟ್ಟಲಾದ ಕಾಲು ಹಾದಿ. ದಾರಿಯಲ್ಲೇ ಇರುವ ಕ್ರುಕೆಡ್ ಹೌಸ್ ಎನ್ನುವ ಒಂದು ಕಟ್ಟಡ ಮನ ಸೆಳೆಯುತ್ತದೆ. ವಿಚಿತ್ರ ಮಾದರಿಯಲ್ಲಿ ಕಟ್ಟಲಾಗಿರುವ ಇದು ವ್ಯಾಪಾರ ಮಳಿಗೆಯೊಂದರ ಭಾಗ. ಎಲ್ಲರಂತೆಯೇ ನಾವೂ ಅದರ ಛಾಯಾಚಿತ್ರವನ್ನು ಸೆರೆಹಿಡಿದುಕೊಂಡು ಮಳೆ ಬರುವ ಸೂಚನೆ ಇದ್ದುದರಿಂದ ನಮ್ಮ ಕೋಣೆಗೆ ವಾಪಾಸಾದೆವು.

ಪ್ರತಿಕ್ರಿಯಿಸಿ: feedback@sudha.co.in